(ಅ) ಹಾಗಿದ್ದಲ್ಲಿ ಈ ನಗರವು ಬೆಳೆದಿರುವಂತೆ ಸಾರ್ವಜನಿಕರಿಗೆ ಮಾರುಕಟ್ಟೆ ವಗೈರೆ ಸೌಲಭ್ಯ ಒದಗಿಸುವುದು ಮಹಾನಗರ ಸಭೆಯ ಕರ್ತವ್ಯವಾಗಿಲ್ಲವೆ?

(ಇ) ಹಾಗಾದರೆ ಸದರಿ ಕ್ಷೇತ್ರದಲ್ಲಿ ಸುಸಜ್ಜಿತವಾದ ಎಷ್ಟು ಮಾರುಕಟ್ಟೆಗಳನ್ನು ನಿರ್ಮಿಸಿದೆ ವಿವರ ನೀಡುವುದು ಹಾಗೂ ಮಾರುಕಟ್ಟೆಗಳಿಗಾಗಿ ಕಾಯ್ದಿರಿಸಿರುವ ನಿವೇಶನಗಳ ವಿವರ ಮತ್ತು ಭೂಮಿಯ ಕ್ಷೇತ್ರ ವಿವರ ನೀಡುವುದು?

(ಈ) ಬೆಳೆಯುತ್ತಿರುವ ನಗರ ಮತ್ತು ಜನಸಂಖ್ಯೆಯ ಪ್ರಮಾಣದಲ್ಲಿ ಸೌಲಭ್ಯಗಳನ್ನು ಕೊಡುವ ಯಾವ ಯೋಜನೆಗಳು ಮಹಾನಗರ ಸಭೆಯಲ್ಲಿದೆ ತಿಳಿಸುವುದು.

ಶ್ರೀ ಬಿ.ಬಿ. ಚಿಮ್ಮನಕಟ್ಟಿ (ನಗರಾಭಿವೃದ್ಧಿ ಸಚಿವರು) :

(ಅ) ಬಂದಿದೆ.

(ಆ) ಹೌದು

(ಇ) ಹುಬ್ಬಳ್ಳಿ-ಧಾರವಾಡ ನಗರಾಭಿವೃದ್ಧಿ ಪ್ರಾಧಿಕಾರದಿಂದ ಅಭಿವೃದ್ಧಿಪಡಿಸಿರುವ ಬಡಾವಣೆಗಳಲ್ಲಿ ಧಾರವಾಡ ಶಹರದ ಸಪ್ತಾಪೂರದಲ್ಲಿ ಜಯನಗರ ಬಡಾವಣೆಯಲ್ಲಿ 16 1/2 ಗುಂಟೆ ಜಾಗೆಯಲ್ಲಿ ಅಂಗಡಿಗಳನ್ನು ನಿರ್ಮಿಸಲಾಗಿದೆ.

(ಈ) ಧಾರವಾಡ ವಿಭಾಗದಲ್ಲಿ ಹಾಲಗೇರಿ ಕೆರೆಯಲ್ಲಿ ಹುಡ್ಕೊ ಆರ್ಥಿಕ ನೆರವಿನಿಂದ ಅಂದಾಜು ವೆಚ್ಚ ರೂ.21.00 ಕೋಟಿಗಳಲ್ಲಿ ಬೃಹತ್ ವಾಣಿಜ್ಯ ಮಳಿಗೆ ಸಂಕೀರ್ಣ ಕಟ್ಟುವ ಬಗ್ಗೆ ಮಹಾನಗರ ಪಾಲಿಕೆ ಠರಾವು ನಂ.824, ದಿನಾಂಕ. 24-6-93 ರಂದು ನಿರ್ಣಯಿಸಿರುತ್ತಾರೆ. ಸದರಿ ಕಾಮಗಾರಿಯನ್ನು ಆರ್ಥಿಕ ಪರಿಸ್ಥಿತಿಗನುಗುಣವಾಗಿ ಹಂತ ಹಂತವಾಗಿ ಕಾಮಗಾರಿ ಕೈಗೆತ್ತಿಕೊಳ್ಳಲು ತೀರ್ಮಾನಿಸಿರುತ್ತದೆ.

10ನೇ ಹಣಕಾಸು ಯೋಜನೆಯಿಂದ ಅಥವಾ ಬೇರೆ ಬೇರೆ ಯೋಜನೆಗಳಿಂದ ಕೈಗೊಂಡಿರುವ ಕಾಮಗಾರಿಗಳು

2034 (2634) : ಶ್ರೀ ಬಸವಂತರೆಡ್ಡಿ ಪೋತಕಪಲ್ಲಿ (ಸೇಡಂ) : ಮಾನ್ಯ ಪೌರಾಡಳಿತ ರಾಜ್ಯ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?ೇ

(ಅ) ಗುಲ್ಬರ್ಗಾ ಜಿಲ್ಲೆಯ ಸೇಡಂ ನಗರಸಭೆಯ ವ್ಯಾಪ್ತಿಯಲ್ಲಿ 10ನೇ ಹಣಕಾಸು ಯೋಜನೆಯಿಂದ ಅಥವಾ ಬೇರೆ ಬೇರೆ ಯೋಜನೆಗಳಲ್ಲಿ ಕೈಗೊಂಡಿರುವ ಕಾಮಗಾರಿಗಳಿಗೆ ಪುರಸಭೆಯ ಮಂಜೂರಾತಿ ಹಾಗೂ ತಾಂತ್ರಿಕ ಮಂಜೂರಾತಿಯನ್ನು ಪಡೆಯದೇ ಕಾಮಗಾರಿಗಳಲ್ಲಿ ಅವ್ಯವಹಾರ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) 10ನೇ ಹಣಕಾಸು ನಿಧಿಯಾಗಲೀ ಅಥವಾ ಬೇರೆ ಬೇರೆ ಯೋಜನೆಗಳಿಂದ 1995-96ನೇ ಸಾಲಿನಿಂದ 1999-2000ನೇ ಸಾಲಿನವರಿಗೆ ನಗರಸಭೆಯಲ್ಲಿ ಜಮಾವಾಗಿರುವ ಹಣವೆಷ್ಟು;

(ಇ) ಈ ಯೋಜನೆಯಲ್ಲಿ ಯಾವ ಯಾವ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ; ಕೆಲಸಗಳ ವಿವರ ನೀಡುವುದು ಮತ್ತು ಅವುಗಳಿಗೆ 1995-96 ರಿಂದ 1999-2000ವರೆಗೆ ತಗಲಿರುವ ಖರ್ಚು ಎಷ್ಟು; ವರ್ಷಾವಾರು ಕೆಲಸವಾರು ವಿವರ ನೀಡುವುದು;

(ಈ) ಪುರಸಭೆಯಲ್ಲಿ ಅನುಮತಿ ಪಡೆಯದೇ ತಾಂತ್ರಿಕ ಮಂಜೂರಿ ಇಲ್ಲದೇ ಕೆಲಸಗಳನ್ನು ಕೈಗೆತ್ತಿಕೊಂಡ ಅವ್ಯವಹಾರ ಮಾಡಿರುವ ಅಧಿಕಾರಿಗಳ ಮೇಲೆ ಕೈಗೊಳ್ಳುವ ಕ್ರಮವೇನು?

ಶ್ರೀ ಎಂ. ಮಲ್ಲಿಕಾರ್ಜುನ ನಾಗಪ್ಪ (ಪೌರಾಡಳಿತ ರಾಜ್ಯ ಸಚಿವರು) :

(ಅ) ಬಂದಿಲ್ಲ.

(ಆ) ಸೇಡಂ ಪುರಸಭೆಗೆ 1995-96 ರಿಂದ 1999-2000ರವರೆಗೆ ಈ ಕೆಳಕಂಡಂತೆ ಹಣ ಜಮಾ ಮಾಡಲಾಗಿದೆ.

1.	ಪುರಸಭೆ ನಿಧಿಯಿಂದ	90,000-00
2.	ಹತ್ತನೇ ಹಣಕಾಸು ಆಯೋಗದಿಂದ	30,00,000-00
3.	ಸ್ವರ್ಣ ಜಯಂತಿ ಶಹರಿ ರೋಜ್‌ಗಾರ್ ಯೋಜನೆ	18,17,500-00

(ಇ) 10ನೇ ಹಣಕಾಸು ಯೋಜನೆಯಡಿಯಲ್ಲಿ 1995-96ರಿಂದ 1999-2000ರವರೆಗೆ ಕೈಗೆತ್ತಿಕೊಂಡ ಕಾಮಗಾರಿಗಳು ಈ ಕೆಳಕಂಡಂತೆ ಇದೆ.

1. ಶಾಪಿಂಗ್ ಕಾಂಪ್ಲೆಕ್ಸ್-10 ಅಂಗಡಿ ರೈಲ್ವೆ ಸ್ಟೇಷನ್ ಕಾಂಪೌಂಡ್ ಗೋಡೆ ಹತ್ತಿರ
2. ತರಕಾರಿ ಮಾರುಕಟ್ಟೆ
3. ಸ್ಲಾಟರ್ ಹೌಸ್
4. ಶಾಪಿಂಗ್ ಕಾಂಪ್ಲೆಕ್ಸ್ ಪುರಸಭೆ ಆವರಣ
5. ಅಬ್ದುಲ್‌ಸಾಬ್ ಮನೆಯಿಂದ ಬಟಗೇರಾ ಸೊಸೈಟಿಯವರಿಗೆ ಸಿಸಿ ರಸ್ತೆ ನಿರ್ಮಾಣ
6. ಶ್ರೀಮತಿ ನಸೀಮ ಬೇಗಂ ರವರ ಮನೆ ಹತ್ತಿರ ಪಕ್ಕದಲ್ಲಿ ಕೊಂಡವಾಡದವರೆಗೆ ರಸ್ತೆ
7. ಐಬಿಯಿಂದ ಓವರ್ ಬ್ರಿಡ್ಜ್ ವರೆಗೆ ಸಿ.ಸಿ. ರಸ್ತೆ ನಿರ್ಮಾಣ
8. ಕೆಇಬಿ ಕಾಲೋನಿಯಲ್ಲಿ ಒಳಚರಂಡಿ ನಿರ್ಮಾಣ ಕೆಲಸ ಮತ್ತು ರೋಡಿಗೆ ಮೆಟ್ಲಿಂಗ್.
9. ಶ್ರೀ ವಿವೇಕಾನಂದ ಶಾಲೆಯಿಂದ ಹಾಗೂ ನೀರಿನ ಸಮಸ್ಯೆ ಎದುರಿಸುತ್ತಿರುವ ಹೊಸದಾಗಿ ನಿರ್ಮಿತವಾದ ಕಾಲೋನಿಗಳಲ್ಲಿ ಪೈಪ್‌ಲೈನ್ ಹೆಚ್ಚಿಸಿ ಹಾಕುವುದು.

1995-96ರಿಂದ 1999-2000ವರೆಗೆ ತಗಲಿರುವ ಒಟ್ಟು ಖರ್ಚು ರೂ. 49,07,500-00.

(ಈ) 11ನೇ ಹಣಕಾಸು ಯೋಜನೆಯಡಿಯಲ್ಲಿ ತಾಂತ್ರಿಕ ಮತ್ತು ಆಡಳಿತಾತ್ಮಕ ಮಂಜೂರಾತಿ ಪಡೆಯದೇ ಯಾವ ಕಾಮಗಾರಿಗಳನ್ನು ಮಾಡಿರುವುದಿಲ್ಲ. ಸದರಿ ಯೋಜನೆಯ ಕಾಮಗಾರಿಯಲ್ಲಿ ಯಾವ ಅವ್ಯವಹಾರ ನಡೆದಿರುವುದಿಲ್ಲ.